2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 145/2019

| | | |
|---|---|---|
| ಸಾಕ್ಷಿದಾರರ ಹೆಸರು | - ನಾಗರಾಜ್ | ಪಿಡಬ್ಲೂ - 3 |
| ತಂದೆಯ ಹೆಸರು | - ಕೆಂಚಪ್ಪ | ಸಿಡಬ್ಲೂ - 3 |
| ವಯಸ್ಸು | - 39 ವರ್ಷ | |
| ಉದ್ಯೋಗ | - ತೋಟದ ಕೆಲಸ | |
| ವಾಸ ಸ್ಥಳ | - ಕುದರಡವು, ಕೂಡ್ಲಿಗಿ ತಾಃ ಬಳ್ಳಾರಿ ಜಿಲ್ಲೆ | |

ದಿನಾಂಕಃ 09-02-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪ್ರಭಾರ ಪಿ.ಪಿ. ರವರಿಂದ -

1. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಆತನನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಫ್ರಾಸಾ.1 ಬೀಬೀ ಜಾನ್ ಗೊತ್ತು, ಅವರು ನನ್ನ ಜೊತೆ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಚಾಸಾ.7 ರೇಷ್ಮಾ ಗೊತ್ತು, ಮೃತ ಮಗು ಅಮಿಷಾ ಸಹ ಗೊತ್ತು. ಚಮನ್ ಸಾಬ್ ನನಗೆ ಗೊತ್ತಿಲ್ಲ. ಚಾಸಾ.4 ರಿಂದ 6 ನನ್ನ ಜೊತೆ ತೋಟದಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರು ನನಗೆ ಪರಿಚಯ ಇರುತ್ತಾರೆ. ಚಾಸಾ.7 ರೇಷ್ಮಾ ರವರ ಮಗು ಅಮಿಷಾ ಈಗ ಇರುವುದಿಲ್ಲ, ಅದು ಮೃತಪಟ್ಟಿರುತ್ತದೆ, ಆದರೆ ಹೇಗೆ ಮೃತಪಟ್ಟಿರುತ್ತದೆ ನನಗೆ ಗೊತ್ತಿಲ್ಲ. ಮಗು ತೀರಿಕೊಂಡಾಗ ಅದರ ವಯಸ್ಸು ಎಷ್ಟು ಇತ್ತು ನನಗೆ ಗೊತ್ತಿಲ್ಲ.

2. ನನಗೆ ಸಹಿ ಮಾಡಲು ಬರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ.8 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿ.ಪಿ.5 ಮತ್ತು 6 ಪೋಟೋಗಳನ್ನು ತೋರಿಸಿದ್ದು, ಅವುಗಳಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ. ನಿ.ಪಿ.8 ಮಹಜರ್ ಗೆ ನಾನು ಅಂದಾಜು 2 ವರ್ಷಗಳ ಹಿಂದೆ ಒಂದು ಮಗು ಮೃತಪಟ್ಟ ಹಿನ್ನೆಲೆಯಲ್ಲಿ ನನಗೆ ಸಹಿ ಮಾಡಲು ಕೇಳಿಕೊಂಡಿದ್ದರಿಂದ ಸಹಿ ಮಾಡಿರುತ್ತೇನೆ. ಆದರೆ ಯಾವ ವಿಚಾರಕ್ಕಾಗಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಗೊತ್ತಿಲ್ಲ ಮತ್ತು ನಾನು ಸಹಿ ಮಾಡಿದ ಮಹಜರ್ ನಲ್ಲಿ ಏನು ಬರೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ನಿ.ಪಿ.5 ಮತ್ತು 6 ಪೋಟೋಗಳಿಗೆ ನನಗೆ ಪೊಲೀಸರು ನಿಲ್ಲು ಎಂದು ಕೇಳಿಕೊಂಡಿದ್ದರಿಂದ ಸದರಿ ಪೋಟೋಗಳಿಗೆ ನಿಂತುಕೊಂಡಿರುತ್ತೇನೆ. ನಿ.ಪಿ.5, 6 ಮತ್ತು 8 ರ ವಿವರಗಳು ನನಗೆ ಗೊತ್ತಿಲ್ಲ.

3. ಸಾಕ್ಷಿಗೆ ಈಗ ನಿ.ಪಿ.2, 3 ಮತ್ತು 4 ಪೋಟೋಗಳನ್ನು ತೋರಿಸಿದ್ದು, ನಿ.ಪಿ.2 ರಲ್ಲಿ ತನ್ನ ಇರುವಿಕೆಯನ್ನು ನೋಡಿ

ಗುರುತಿಸಿರುತ್ತಾರೆ ಮತ್ತು ನಿ.ಪಿ.3 ಮತ್ತು 4 ಪೋಟೋಗಳಲ್ಲಿ ಮೃತ ಮಗುವಿನ ಶವ ಇರುವ ಬಗ್ಗೆ ಹೇಳುತ್ತಾರೆ. ಪೊಲೀಸರು ನನಗೆ ಈಗ 2 ವರ್ಷಗಳ ಹಿಂದೆ ಚಿಕ್ಕಮಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಶವಗಾರದಲ್ಲಿ ಮಗುವಿನ ಹತ್ತಿರ ನನ್ನ ಪೋಟೋವನ್ನು ತೆಗೆದಿರುತ್ತಾರೆ, ಆದರೆ ನಾನು ಆ ಸಮಯದಲ್ಲಿ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

4. ಸಾಕ್ಷಿಗೆ ದಿಃ 04.08.2019 ರ ಆರೋಪಿಯ ಸ್ವಇಚ್ಛಾ ಹೇಳಿಕೆಯಲ್ಲಿ ಇರುವ ತನ್ನ ಸಹಿಯನ್ನು ತೋರಿಸಿದ್ದು, ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ಪೊಲೀಸರ ಕೋರಿಕೆಯ ಮೇರೆಗೆ 2 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಆದರೆ ಯಾವ ವಿಚಾರಕ್ಕಾಗಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ನನ್ನೊಂದಿಗೆ ಸದರಿ ದಾಖಲೆಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆರೋಪಿಯು ಪೊಲೀಸ್ ಠಾಣೆಯಲ್ಲಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ.

5. ಸಾಕ್ಷಿಗೆ ಈಗ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಅದು ಪಂಚರಿಗೆ ಮಹಜರ್ ಗೆ ನೀಡುವ ನೋಟೀಸು ಆಗಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿ.ಪಿ.9 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ದಿಃ 05.08.2019 ರ ಮೊಬೈಲ್ ಅಮಾನತ್ತು ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಅಮಾನತ್ತು ಪಂಚನಾಮೆಯನ್ನು ನಿ.ಪಿ.10 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಪ್ರಕರಣದ ಮುದ್ದೆ ಮಾಲುಗಳನ್ನು ಸಂಬಂಧಿಸಿದ ಪೊಲೀಸರು ಹಾಜರು ಪಡಿಸದೇ ಇದುದ್ದರಿಂದ ಸಾಕ್ಷಿಯ ಮುಂದು ವರೆದ ವಿಚಾರಣೆಯನ್ನು ಮುಂದೂಡಲಾಯಿತು)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.

ದಿನಾಂಕಃ 17-09-2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

6. ಸಾಕ್ಷಿಯು ಈಗಾಗಲೇ ನಿಪಿ.23 ಎಂದು ಗುರುತಿಸಲಾಗಿರುವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.23(ಬಿ)ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮಲ್ಲಂದೂರು ಪೊಲೀಸ್ ಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಈಗ್ಗೆ 4 ವರ್ಷಗಳ ಹಿಂದೆ ಮಾಡಿದ್ದೇನೆ. ನಾನು ಠಾಣೆಗೆ ಹೋದಾಗ ಅಲ್ಲಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಇರಲಿಲ್ಲ. ಪೊಲೀಸರು ಠಾಣೆಯಿಂದ ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿರಲಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನೂ ಅಮಾನತುಪಡಿಸಿಕೊಂಡಿಲ್ಲ. ಸಾಕ್ಷಿಯ ಸಮಕ್ಷಮ ಪೊಲೀಸರು ಅಮಾನತುಪಡಿಸಿಕೊಂಡಿದ್ದಾರೆ ಎಂದು ಹೇಳಲಾದ ಉಲ್ಲನ್ ರಗ್ಗಿನ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿ ಸದರಿ ಸಹಿಯನ್ನು ಸಹ ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎನ್ನುತ್ತಾರೆ.

7. ಸಾಕ್ಷಿಯು ಈಗಾಗಲೇ ನಿಪಿ.24 ಎಂದು ಗುರುತಿಸಲಾಗಿರುವ ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಸದರಿ

ಫೋಟೋವನ್ನು ಎಲ್ಲಿ, ಯಾರು, ಯಾವ ಕಾರಣಕ್ಕೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೋದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರೆಲ್ಲಾ ಇದ್ದಾರೆ ಎಂದು ನನಗೆ ಗೊತ್ತಿಲ್ಲ.

8. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ದಿನಾಂಕ 05.08.2019 ರಂದು ಪಂಚನಾಮೆಗೆ ಜರುಗಿಸಲು ಸಹಕರಿಸುವಂತೆ ಪೊಲೀಸರು ನೀಡಿದ್ದಾರೆ ಎಂದು ಹೇಳಲಾದ ನೋಟೀಸು ಮತ್ತು ಅದೇ ದಿನ ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ ಅಮಾನತು ಪಂಚನಾಮೆಯಾಗಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ25 ಮತ್ತು ನಿಪಿ.26 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.25(ಬಿ) ಮತ್ತು ನಿಪಿ.26(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಎಲ್ಲಿ, ಯಾವಾಗ, ಯಾವ ವಿಚಾರಕ್ಕೆ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. ಪೊಲೀಸರು ಪಂಚನಾಮೆಗೆ ಸಹಕರಿಸುವಂತೆ ನನಗೆ ಯಾವುದೇ ನೋಟೀಸನ್ನು ನೀಡಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನೂ ಅಮಾನತುಪಡಿಸಿಕೊಂಡಿಲ್ಲ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

9. ಸಾಕ್ಷಿಗೆ ಮತ್ತೆರಡು ದಾಖಲೆಗಳನ್ನು ತೋರಿಸಲಾಗಿ

ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ದಿನಾಂಕ 05.08.2019 ರಂದು ಪೊಲೀಸರು ಆರೋಪಿಯಿಂದ ಅಮಾನತುಪಡಿಸಿಕೊಂಡಿದ್ದಾರೆ ಎಂದು ಹೇಳಲಾದ ಚಾಸಾ.7 ರೇಷ್ಮಾ ರವರ ಹೆಬ್ಬೆಟ್ಟಿನ ಗುರುತನ್ನು ಆರೋಪಿ ಹಾಕಿಸಿಕೊಂಡ ಎರಡು ಬಿಳಿಯ ಖಾಲಿ ಹಾಳೆಗಳಾಗಿದ್ದು, ಅವುಗಳನ್ನು ಕ್ರಮವಾಗಿ ಈಗಾಗಲೇ ನಿಪಿ27 ಮತ್ತು ನಿಪಿ.28 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.27(ಬಿ) ಮತ್ತು ನಿಪಿ.28(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಎಲ್ಲಿ, ಯಾವಾಗ, ಯಾವ ವಿಚಾರಕ್ಕೆ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. ಪೊಲೀಸರು ಸದರಿ ದಾಖಲೆಗಳನ್ನು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡಿಲ್ಲ.

10. ಸಾಕ್ಷಿಗೆ ಈಗಾಗಲೇ ನಿಪಿ.29 ಮತ್ತು ನಿಪಿ.30 ರಲ್ಲಿರುವ ಫೋಟೋಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ ಸದರಿ ಫೋಟೋಗಳನ್ನು ಎಲ್ಲಿ, ಯಾವ ವಿಚಾರಕ್ಕೆ ಯಾರು ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

11. ಸಾಕ್ಷಿಯು ಈಗಾಗಲೇ ನಿಪಿ.21 ಎಂದು ಗುರುತಿಸಲಾಗಿರುವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.21(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಸಹಕರಿಸುವಂತೆ

ಪೊಲೀಸರು ನೀಡಿದ್ದಾರೆ ಎಂದು ಹೇಳಲಾದ ನೋಟೀಸಿನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸನ್ನು ನಿಪಿ.39 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.39(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಎಲ್ಲಿ, ಯಾವ ವಿಚಾರಕ್ಕೆ ಯಾವಾಗ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಯಾವುದೇ ಮಗುವಿನ ಮೃತದೇಹವನ್ನು ಹೊರತೆಗೆದು ಅದರ ತೊಡೆಯ ಮೂಳೆಯನ್ನು ಅಮಾನತುಪಡಿಸಿಕೊಂಡಿಲ್ಲ. ಅವುಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

12. ಪೊಲೀಸರು ನನ್ನನ್ನು ಯಾವುದೇ ನ್ಯಾಯಾಧೀಶರ ಮುಂದೆ ಹಾಜರುಪಡಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಪೊಲೀಸರು ನನ್ನನ್ನು ಘಟನೆಯ ಬಗ್ಗೆ ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಮರು ಹೇಳಿಕೆಯನ್ನು ನೀಡಿಲ್ಲ. ನಾನು ಸಹಿ ಮಾಡಿರುವ ದಾಖಲೆಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ, ಪೊಲೀಸರು ನನಗೆ ಅದನ್ನು ಓದಿ ಹೇಳಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

13. ದಿನಾಂಕ 04.08.2019 ರಂದು ಚಾಸಾ.7 ರವರ ಮಗಳು ಅಮಿಷಾ ಕೊಲೆಯಾಗಿದ್ದ ವಿಷಯ ತಿಳಿದು ನೀವು ಮಗುವಿನ ಶವವನ್ನು ನೋಡಲು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಹೋಗಿದ್ದಿರಿ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ಸದರಿ ಮಗುವಿನ ಮೃತ ದೇಹದ ಮೇಲೆ ಶವತನಿಖೆಯನ್ನು ಕೈಗೊಂಡ ಸಮಯದಲ್ಲಿ ನಾನು ಹಾಜರಿದ್ದೆನು ಎಂದರೆ ಸರಿಯಲ್ಲ. ಆಗ ಆರೋಪಿಗೆ ಚಾಸಾ.7 ರವರೊಂದಿಗೆ ಅಕ್ರಮ ಸಂಬಂಧವಿದ್ದು ಅವರ ನಡುವೆ ಜಗಳವಾಗಿ ನಂತರ ಆರೋಪಿತನು ಚಾಸಾ.7 ರವರಿಗೆ ಏನನ್ನೋ ಕುಡಿಯಲು ಕೊಟ್ಟು ಪ್ರಜ್ಞೆ ತಪ್ಪಿಸಿ ಮಗು ಮೃತ ಅಮಿಷಾಳನ್ನು ಯಾವುದೋ ರೀತಿಯಲ್ಲಿ ಕೊಲೆ ಮಾಡಿ ಹೋಗಿರುವುದಾಗಿ ತಿಳಿಯಿತು ಎಂದರೆ ಸರಿಯಲ್ಲ. ಆ ವಿಚಾರವನ್ನು ತಿಳಿಸಿ ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.40 ಎಂದು ಗುರುತಿಸಲಾಯಿತು.

14. ದಿನಾಂಕ 04.08.2019 ರಂದು ಚಾಸಾ.7 ರವರು ಚಿಕ್ಕಮಗಳೂರು ತಾಲ್ಲೂಕು, ಜೋಳದಾಳ್ ಪಾಳ್ಯ, ಸುಧೀರ್ ಗೌಡರವರ ಕಾಫಿ ತೋಟದ ಕೂಲಿ ಲೈನ್ ನ ಮನೆಯಲ್ಲಿ ಚಾಸಾ.7 ರವರು ವಾಸವಿದ್ದ ಮನೆಯಲ್ಲಿ ಚಾಸಾ.7 ರವರು ಕೃತ್ಯ

ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ನನ್ನ ಮತ್ತು ಸಹ ಪಂಚನಾದ ಚಾಸಾ.2 ರವರ ಸಮಕ್ಷಮ ನಿಪಿ.8 ರಂತೆ ಪಂಚನಾಮೆಯನ್ನು ಜರುಗಿಸಿ ನಿಪಿ.5 ಮತ್ತು ನಿಪಿ.6 ರಂತೆ ಫೋಟೋಗಳನ್ನು ತೆಗೆದುಕೊಂಡರು ಎಂದರೆ ಸರಿಯಲ್ಲ.

15. ದಿನಾಂಕ 05.08.2019 ರಂದು ಚಿಕ್ಕಮಗಳೂರು ಗ್ರಾಮಾಂತರ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಪೊಲೀಸರ ವಶದಲ್ಲಿದ್ದ ಆರೋಪಿ ತಾನು ಚಾಸಾ.7 ರವರೊಡನೆ ಅಕ್ರಮ ಸಂಬಂಧವನ್ನು ಹೊಂದಿದ್ದ ಬಗ್ಗೆ ತನ್ನ ವಶದಲ್ಲಿದ್ದ ಒಂದು Oppo ಮೊಬೈಲ್ ನ್ನು ಪೊಲೀಸರಿಗೆ ಹಾಜರುಪಡಿಸಿದ ಮೇರೆಗೆ ಅದನ್ನು ಪೊಲೀಸರು ನನ್ನ ಮತ್ತು ಸಹ ಪಂಚನಾದ ಚಾಸಾ.11 ರವರ ಸಮಕ್ಷಮ ನಿಪಿ.10 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನಿಪಿ.9 ರಂತೆ ನೋಟೀಸನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ.

16. ದಿನಾಂಕ 05.08.2019 ರಂದು ಆರೋಪಿ ನನ್ನನ್ನು ಮತ್ತು ಸಹ ಪಂಚರಾದ ಚಾಸಾ.11 ರವರನ್ನು ಮತ್ತು ಪೊಲೀಸರನ್ನು ಚಾಸಾ.7 ರವರು ವಾಸವಾಗಿದ್ದ ಚಾಸಾ.12 ರವರಿಗೆ ಸೇರಿದ ಜೋಳದಾಳ್ ಪಾಳ್ಯ ಗ್ರಾಮದಲ್ಲಿರುವ ಕೂಲಿ ಲೈನ್ ನ ಮನೆಗೆ ಕರೆದುಕೊಂಡು ಹೋಗಿ ದಿನಾಂಕ 03.08.2019 ರಂದು ಸದರಿ ಮನೆಯ ಹಾಲಿನಲ್ಲಿ ಮಲಗಿದ್ದ ಮಗು ಅಮಿಷಾಳ ಮೂಗು ಮತ್ತು ಬಾಯಿಯನ್ನು ತನ್ನ

ಕೈಯಿಂದ ಒತ್ತಿ, ಉಸಿರುಗಟ್ಟಿಸಿ ಕೊಲೆ ಮಾಡಿದ ಸ್ಥಳ ಅದೇ ಎಂದು ತಿಳಿಸಿ ಕೊಲೆ ಮಾಡಿದ ನಂತರ ಯಾರಿಗೂ ತಿಳಿಯದ ಹಾಗೇ ಒಂದು ಸಣ್ಣ ಉಲ್ಲನ್ ರಗ್ಗನ್ನು ಹೊದಿಸಿದ್ದಾಗಿ ತಿಳಿಸಿ ಸದರಿ ಸ್ಥಳದಲ್ಲಿದ್ದ ಒಂದು ಉಲ್ಲನ್ ರಗ್ಗನ್ನು ಹಾಜರುಪಡಿಸಿದ್ದಾನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಸದರಿ ಸ್ಥಳದಲ್ಲಿ ನನ್ನ ಹಾಗೂ ಚಾಸಾ.11 ರವರ ಸಮಕ್ಷಮ ನಿಪಿ.23 ರಂತೆ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಸದರಿ ಉಲ್ಲನ್ ರಗ್ಗನನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನಿಪಿ.22 ರಂತೆ ನೋಟೀಸನ್ನು ಜಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ರಗ್ಗನ್ನು ವಶಪಡಿಸಿಕೊಂಡ ಸಮಯದಲ್ಲಿ ನಿಪಿ.24 ರಂತೆ ಫೋಟೋವನ್ನು ತೆಗೆಯಲಾಯಿತು ಎಂದರೆ ಸರಿಯಲ್ಲ. ನಿಪಿ.23 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

17. ಅದೇ ದಿನ ಅಂದರೆ ದಿನಾಂಕ 05.08.2019 ರಂದು ಆರೋಪಿ ನನ್ನನ್ನು ಮತ್ತು ಸಹ ಪಂಚರಾದ ಚಾಸಾ.11 ರವರನ್ನು ಮತ್ತು ಪೊಲೀಸರನ್ನು ಕಡೂರು ತಾಲೂಕು, ಕುರುಬರಹಳ್ಳಿಯಲ್ಲಿರುವ ಪೊಲೀಸ್ ತರಬೇತಿ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಸದರಿ ಕೇಂದ್ರದ 1 ನೇ ಮಹಡಿಯಲ್ಲಿ ರೂಮ್ ನಂಬರ್ 7 ಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆತ

ಮಲಗುತ್ತಿದ್ದ ಮಂಚದ ಮೇಲೆ ಇದ್ದ ಬ್ಯಾಗಿನಿಂದ ಎರಡು ಬಿಳಿಯ ಖಾಲಿ ಹಾಳೆಗಳನ್ನು ತೆಗೆದು ಸದರಿ ಹಾಳೆಗಳು ತಾನು ಚಾಸಾ.7 ರೇಷ್ಮಾಳ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿಕೊಂಡ ಹಾಳೆಗಳು ಎಂದು ಈಗಾಗಲೇ ನಿಪಿ.27 ಮತ್ತು ನಿಪಿ.28 ಎಂದು ಗುರುತಿಸಲ್ಪಟ್ಟಿರುವ ಹಾಳೆಗಳನ್ನು ಹಾಜರುಪಡಿಸಿದನು ಎಂದರೆ ಸರಿಯಲ್ಲ. ಆ ಸಮಯದದಲ್ಲಿ ನಿಪಿ.29 ಮತ್ತು 30 ರಂತೆ ಫೋಟೋಗಳನ್ನು ತೆಗೆಯಲಾಯಿತು ಎಂದರೆ ಸರಿಯಲ್ಲ. ಸದರಿ ಹಾಳೆಗಳನ್ನು ಪೊಲೀಸರು ಕೆಂಪು ಶಾಹಿಯಲ್ಲಿ Q1 ಮತ್ತು Q2 ಎಂದು ಸಂಕೇತವನ್ನು ನೀಡಿ ಅವುಗಳನ್ನು ಒಂದು ಖಾಕಿ ಕವರ್ ನಲ್ಲಿ ಹಾಕಿ ಸೀಲು ಮಾಡಿ ನಿಪಿ.26 ರಂತೆ ಮಧ್ಯಾಹ್ನ 1.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನಿಪಿ.25 ರಂತೆ ನೋಟೀಸನ್ನು ಜಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.26 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

18. ದಿನಾಂಕ 10.08.2019 ರಂದು ಪೊಲೀಸರು ರಾಮನಹಳ್ಳಿಯಲ್ಲಿರುವ ಮುಸ್ಲಿಂ ಸ್ಮಶಾನದಲ್ಲಿ ಪಂಚನಾಮೆಗೆ ಸಹಕರಿಸುವಂತೆ ನಿಪಿ.39 ರಂತೆ ನೋಟೀಸನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ಅದರ ಮೇರೆಗೆ ನಾನು ಸದರಿ ಸ್ಮಶಾನದಲ್ಲಿ ಹಾಜರಿದ್ದೆನು ಎಂದರೆ ಸರಿಯಲ್ಲ. ಆಗ ಸದರಿ

ಸ್ಥಳದಲ್ಲಿ ಪೊಲೀಸರು ನನ್ನ ಮತ್ತು ಸಹ ಪಂಚರಾದ ಚಾಸಾ.6, ಚಾಸಾ.14 ಮತ್ತು ಚಾಸಾ.15, ತಹಶೀಲ್ದಾರ್ ರವರಾದ ಚಾಸಾ.13 ರವರು ಮತ್ತು ವೈದ್ಯರಾದ ಚಾಸಾ.19 ರವರು ಹಾಜರಿದ್ದರು ಎಂದರೆ ಸರಿಯಲ್ಲ. ಸದರಿ ಸ್ಮಶಾನದಲ್ಲಿ ದಫನ್ ಮಾಡಲಾಗಿದ್ದ ಮಗು ಅಮಿಷಾಳ ನಿಜವಾದ ತಂದೆ ಯಾರು ಎಂದು ತಿಳಿಯಲು ಆಕೆಯ ಬಲತೊಡೆಯ ಮೂಳೆಯನ್ನು ಸಂಗ್ರಹಿಸುವ ಸಲುವಾಗಿ ಆಕೆಯ ಶವವನ್ನು ದಫನ್ ಮಾಡಿದ ಸ್ಥಳದಿಂದ ಹೊರತೆಗೆದು ಸ್ಥಳದಲ್ಲಿ ಹಾಜರಿದ್ದ ಚಾಸಾ.19 ರವರು ಮಗುವಿನ ಬಲಗಾಲಿನ ತೊಡೆಯ ಮೂಳೆಯನ್ನು ಶೇಖರಿಸಿಕೊಂಡು ನಂತರ ನನ್ನ ಮತ್ತು ಸಹ ಪಂಚನಾದ ಚಾಸಾ.11 ಮತ್ತು ಚಾಸಾ.13 ರವರ ಸಮಕ್ಷಮ ಮಗುವಿನ ಶವವನ್ನು ದಫನ್ ಮಾಡಿ ಆ ಬಗ್ಗೆ ನಿಪಿ.21 ರಂತೆ ಪಂಚನಾಮೆಯನ್ನು ಜರುಗಿಸಲಾಯಿತು ಎಂದರೆ ಸರಿಯಲ್ಲ.

19. ದಿನಾಂಕ 16.08.2019 ರಂದು ಪೊಲೀಸರು ನಿಮ್ಮನ್ನು ಚಿಕ್ಕಮಗಳೂರಿನ ಪ್ರಧಾನ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರ ಬಳಿ ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಆಗ ನೀವು ಅವರಿಗೆ ಘಟನೆಯ ಕುರಿತು ಹೇಳಿಕೆಯನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.41 ಎಂದು ಗುರುತಿಸಲಾಯಿತು.

20. ದಿನಾಂಕ 16.08.2019 ರಂದು ನಾನು ಪೊಲೀಸರಿಗೆ ಮರು ಹೇಳಿಕೆಯನ್ನು ನೀಡಿ ಮೇಲೆ ತಿಳಿಸಿದ ಪಂಚನಾಮೆಗಳಿಗೆ

ಸಹಕರಿಸಿದ್ದ ಬಗ್ಗೆ ಮತ್ತು ಆರೋಪಿ ಚಾಸಾ.7 ರವರ ಮಗಳಾದ ಮೃತ ಅಮಿಷಾಳನ್ನು ತನ್ನ ಕೈಗಳಿಂದ ಒತ್ತಿ, ಉಸಿರುಗಟ್ಟಿಸಿ ಕೊಲೆ ಮಾಡಿರುವುದಾಗಿ ತಿಳಿಯಿತು ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಮರುಹೇಳಿಕೆಯಲ್ಲಿ ನಿಪಿ.41 ಎಂದು ಗುರುತಿಸಲಾಯಿತು.

21. ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿಯೊಂದಿಗೆ ಶಾಮೀಲಾಗಿ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಓ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.